C.R.P.67

Form No.4 (Criminal)
Deposition Sheets
(R.P.No.57)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

Spl.C. No.270/2023 ಪಿ.ಡಬ್ಲ್ಯೂ-4 ಸಿ.ಡಬ್ಲ್ಯೂ-18

ದಿನಾಂಕಃ- 22.01.2026 ರಂದು ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಮರಿಯಪ್ಪ ರುದ್ರಪ್ಪ ಬ್ಯಾಳಿ |
| ತಂದೆಯ ಹೆಸರು | ರುದ್ರಪ್ಪ ಬ್ಯಾಳಿ |
| ವಯಸ್ಸು | 37 ವರ್ಷ |
| ಉದ್ಯೋಗ | PSI, ಕೊಣನೂರು ಪೊಲೀಸ್ ಠಾಣೆ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ |
| ವಾಸ | ಕೊಣನೂರು |

ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ನಾನು 04.03.2023 ರಿಂದ 12.08.2024 ರವರೆಗೆ ಅರಕೆರೆ ಪೊಲೀಸ್ ಠಾಣೆಯಲ್ಲಿ PSI ಕೆಲಸ ಮಾಡಿದ್ದೇನೆ.

2. 2023 ಜೂನ್ ತಿಂಗಳಿನಲ್ಲಿ ಹೆಚ್ ಎಸ್ ಮುರಳಿ ರವರು ಶ್ರೀರಂಗಪಟ್ಟಣ ಉಪ ವಿಭಾಗದಲ್ಲಿ DYSP ಕೆಲಸ ಮಾಡಿದ್ದಾರೆ. ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಇರುವ ಅರಕೆರೆ ಪೊಲೀಸ್ ಠಾಣೆ ಶ್ರೀರಂಗಪಟ್ಟಣ ಉಪ ವಿಭಾಗದ ಪರಿಧಿಯಲ್ಲಿ ಬರುತ್ತದೆ.

3. ನಾನು ದಿಃ 27.06.2023 ರಂದು ಹೆಚ್.ಎಸ್. ಮುರಳಿ ರವರ ಜೊತೆಯಲ್ಲಿ ಮತ್ತು ಪಂಚರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ

ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋದೆನು. ಶಶಿಕುಮಾರ ರವರ ಮನೆಯ ಹತ್ತಿರ DYSP ರವರು ತನಿಖೆ ಮಾಡಿದಾಗ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು.

4. DYSP ರವರು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದ್ದೆವು. ನಮ್ಮ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿದೆವು. DYSP ರವರು ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುಸಿತಿರುವ ಫೋಟೋಗಳನ್ನು ತೆಗೆಸಿ ವಶಡಿಪಸಿಕೊಂಡೆವು.

5. DYSP ರವರು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಬಂದರು. ಅರಕೆರೆ ಪೊಲೀಸ್ ಠಾಣೆಯಲ್ಲಿ DYSP ರವರು ವರದಿಯನ್ನು ತಯಾರಿಸಿ ನನ್ನ ಕೈಗೆ ಕೊಟ್ಟರು . DYSP ರವರು ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ನನ್ನ ಕೈಗೆ ಕೊಟ್ಟರು. DYSP ರವರು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೊಟೀಸು ಮತ್ತು ಆರೋಪಿಯನ್ನು ನನ್ನ ಸ್ವಾಧೀನಕ್ಕೆ ಕೊಟ್ಟರು. ನಾನು DYSP ಕೊಟ್ಟ ವರದಿ ಮತ್ತು ಇತರ ದಾಖಲೆಗಳ ಆಧಾರದ ಮೇಲೆ ಆರೋಪಿಯ ವಿರುದ್ಧ

104/23 ನೇ ಪ್ರಕರಣ ದಾಖಲಿಸಿ ನಿಪಿ.11 ರಲ್ಲಿ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ.

6. ನ್ಯಾಯಾಲಯದಲಿ ಹಾಜರಿರುವ ಆರೋಪಿ ಶಶಿ ಕುಮಾರನನ್ನು ದಿಃ 27.06.2023 ರಂದು ಅರಕೆರೆ ಗ್ರಾಮದಲ್ಲಿ ಆತನ ಮನೆಯ ಹತ್ತಿರ DYSP ರವರು ಸಿಬ್ಬಂದಿಯ ಸಹಾಯದಿಂದ ಹಿಡಿದು ಅರಕೆರೆ ಠಾಣೆಗೆ ಕರೆ ತಂದು ಅರಕೆರೆ ಪೊಲೀಸ್ ಠಾಣೆಯಲ್ಲಿ ನನ್ನ ಸ್ವಾಧೀನಕ್ಕೆ ಕೊಟ್ಟಿದ್ದಾರೆ. ನಾನು 27.06.2023 ರಂದು ಆರೋಪಿ ಸ್ವ ಇಚ್ಚೆಯಿಂದ ಹೇಳಿದ ವಿಚಾರಗಳನ್ನು ದಾಖಲಿಸಿಕೊಂಡೆನು. ನಾನು 27.06.2023 ರಂದು ಆರೋಪಿಯನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ನ್ಯಾಯಾಲಯದ ಸಮಕ್ಷಮ ಹಾಜರು ಪಡಿಸಿದ್ದೇನೆ.

7. ದಿಃ 10.07.2023 ರಂದು ನಿಪಿ. 14 ಮತ್ತು 15 ರಲ್ಲಿ ಗುರುತಿಸಿರುವ 27.06.2023 ನೇ ದಿನಾಂಕದ DYSP ಕಛೇರಿಯ ಠಾಣಾ ದಿನಚರಿಯ ಪ್ರತಿಯನ್ನು ಕವಚ ಪತ್ರದ ಜೊತೆಯಲ್ಲಿ DYSP ರವರು ನನಗೆ ಕಳುಹಿಸಿದ್ದಾರೆ.

8. ನಾನು DYSP ರವರಿಂದ ಗಾಂಜಾ ವಸ್ತುಗಳನ್ನು ಪಡೆದುಕೊಂಡ ವಿಚಾರವನ್ನು PF ನಂಬರ್ 55/23 ರಲ್ಲಿ ನಮೂದಿಸಿ ನ್ಯಾಯಾಲಯಕ್ಕೆ ವರದಿ ಕಳುಹಿಸಿದ್ದೇನೆ.

9. ನಾನು ತನಿಖೆ ಕಾಲದಲ್ಲಿ ಸಿದ್ದರಾಜು ಬಿನ್ ದೇವೆಗೌಡ ಮತ್ತು ಮಹೇಶ ಬಿನ್ ಪುಟ್ಟಶೆಟ್ಟಿರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ.

10. ನಾನು ಶ್ರೀರಂಗಪಟ್ಟಣದಲ್ಲಿ ಇರುವ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ವಿನಂತಿ ಪತ್ರ ಕಳುಹಿಸಿ PF ನಂಬರ್ 55/23 ರಲ್ಲಿ ನಮೂದಿಸಿರುವ ವಸ್ತುಗಳ ಇನ್ವೆಂಟರಿ ಮಾಡಿಸಿದ್ದೇನೆ. ನನ್ನ ವಿನಂತಿಯ ಪ್ರಕಾರ ನ್ಯಾಯಾಧೀಶರು 30.06.2023 ರಂದು ಇನ್ವೆಂಟರಿ ನಡೆಸಿ ಫೋಟೋ ತೆಗೆಸಿ ವರದಿ

ತಯಾರಿಸಿ ನಮ್ಮ ಕಛೇರಿಗೆ ಕಳುಹಿಸಿದ್ದಾರೆ. ನ್ಯಾಯಾಧೀಶರು ಇನ್ವೆಂಟರಿ ಪ್ರಕ್ರಿಯೆ ನಡೆಸಿದಾಗ ನಾನು ಹಾಜರಿದ್ದೆನು.

11. ಈ ಸಾಕ್ಷಿ 27.06.2023 ರಂದು ನ್ಯಾಯಾಧೀಶರಿಗೆ ಕಳುಹಿಸಿದ ಪತ್ರ ಇನ್ವೆಂಟರಿ ವರದಿ/ಮಹಜರು ಗಳಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿ ಇರುವ ಮೇಲೆ ವಿವರಿಸಿದ ದಾಖಲೆಗಳನ್ನು ನಿಪಿ. 17 ರಿಂದ ನಿಪಿ.19 ರವರೆಗೆ ಗುರುತಿಸಲಾಯಿತು. ಈ ಸಾಕ್ಷಿ ಇನ್ವೆಂಟರಿ ವರದಿಯ ಜೊತೆಯಲ್ಲಿ ಇರುವ 4 ಫೋಟೋಗಳಲ್ಲಿ ತಾನು, ನ್ಯಾಯಾಧೀಶರು, ಮತ್ತು ನ್ಯಾಯಾಲಯದ ಸಿಬ್ಬಂದಿ ಕಾಣಿಸುತ್ತಿರುವುದಾಗಿ ಗುರುತಿಸಿದ್ದಾರೆ.

12. ಈ ಸಾಕ್ಷಿ ಗುರುತಿಸಿದ 4 ಫೋಟೋಗಳನ್ನು ಕ್ರಮವಾಗಿ ನಿಪಿ–20 ರಿಂದ 23 ರವರೆಗೆ ಗುರುತಿಸಲಾಯಿತು.

13. ತನಿಖೆ ಕಾಲದಲ್ಲಿ 01.06.2021 ನೇ ದಿನಾಂಕದ ಶಶಿಕುಮಾರ ರವರು ವಾಸವಾಗಿದ್ದ ಭೋಗ್ಯದ ಕರಾರು ಪತ್ರದ ಪ್ರತಿ, ASI ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65(ಬಿ) ರನ್ವಯ ಕೊಟ್ಟಂತಹ ಪ್ರಮಾಣ ಪತ್ರ, ಕೆ ಆರ್ ಸಾಗರ CPI ಕಛೇರಿಯ 27.6.2023 ನೇ ದಿನಾಂಕದ ದಿನಚರಿಯ ಪ್ರತಿ ಅಡಕದ ಜೊತೆಯಲ್ಲಿ ಪಡೆದಿದ್ದೇನೆ. ಈ ಸಾಕ್ಷಿ ಮೇಲೆ ವಿವರಿಸಿದ ದಾಖಲೆಗಳನ್ನು ಕ್ರಮವಾಗಿ ನಿಪಿ–24 ರಿಂದ ನಿಪಿ–27 ರವರೆಗೆ ಗುರುತಿಸಲಾಯಿತು.

14. ನಾನು ರಾಸಾಯನಿಕ ಪರೀಕ್ಷೆಗೆ RFSL ಕಛೇರಿಗೆ ಕಳುಹಿಸಿ ಉಳಿದ PF 55/23 ರಲ್ಲಿ ನಮೂದಿಸಿದ ವಸ್ತುಗಳನ್ನು ನಾಶಪಡಿಸುವಂತೆ ದಿಃ 08.07.2023 ರಂದು ಮಂಡ್ಯ drug disposal committee ಗೆ ವಿನಂತಿ ಪತ್ರವನ್ನು ಕಳುಹಿಸಿದ್ದೇನೆ. ಈ ಸಾಕ್ಷಿ ಮೇಲೆ ಹೇಳಿದ ಪತ್ರವನ್ನು ನಿಪಿ.28 ಎಂದು ಗುರುತಿಸಲಾಯಿತು.

15. ನಾನು ದಿಃ 13.07.2023 ರಂದು RFSL ಕಛೇರಿಯವರು ಕಳುಹಿಸಿದ ನಿಪಿ.16 ರಲ್ಲಿ ಗುರುತಿಸಿರುವ ವರದಿಯನ್ನು 26.08.2023 ರಂದು ಮಾದರಿ ಮಾಲಿನ ಸಮೇತ ಪಡೆದಿದ್ದೇನೆ. ನ್ಯಾಯಾಲಯದಲ್ಲಿ ಹಾಜರು ಪಡಿಸಿರುವ ಸೀಲಾದ ಬಟ್ಟೆಯ ಗಂಟನ್ನು ನಿಪಿ-16 ರಲ್ಲಿ ಗುರುತಿಸಿರುವ ವರದಿಯ ಜೊತೆಯಲ್ಲಿ ಪಡೆದಿದ್ದೇನೆ. ಈ ಸಾಕ್ಷಿ ಮೇಲೆ ಹೇಳಿದಂತೆ ಗುರುತಿಸಿದ ಬಟ್ಟೆಯ ಗಂಟನ್ನು ಎಂಒ-1 ಎಂದು ಗುರುತಿಸಲಾಯಿತು.

16. ಈ ಸಾಕ್ಷಿ ನಿಪಿ-2, 9, 10, 11, 12, 15, 16, 17, 18, 24, 25, 26, 27, 28 ರಲ್ಲಿ ಗುರುತಿಸಿರುವ ದಾಖಲೆಗಳಲ್ಲಿ ತನ್ನ ಸಹಿ ಇರುವುದನ್ನು ಗುರುತಿಸಿದ್ದಾರೆ. ಈ ಸಾಕ್ಷಿಯ ಸಹಿಗಳನ್ನು ನಿಪಿ-2(ಡಿ), 9(ಬಿ), 10(ಬಿ), 11(ಬಿ), 12(ಬಿ), 15(ಎ), 16(ಎ), 17(ಎ), 18(ಎ), 24(ಎ), 25(ಎ), 26(ಎ), 27(ಎ) ಮತ್ತು 28(ಎ) ಎಂದು ಗುರುತಿಸಲಾಯಿತು.

17. ನಾನು 05.10.2023 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ.

ಪಾಟೀ ಸವಾಲುಃ- ಆರೋಪಿ ಪರವಾಗಿ ಶ್ರೀ.ಜೈ ಶಂಕರ್ ವಕೀಲರಿಂದಃ-

1. ನಾನು ದಿಃ 27.06.2023 ರಂದು ಹೆಚ್.ಎಸ್. ಮುರಳಿ ರವರ ಜೊತೆಯಲ್ಲಿ ಮತ್ತು ಪಂಚರ ಜೊತೆಯಲ್ಲಿ ಕೊಡಿಯಾಲ ಗ್ರಾಮದ ಡೈರಿ ಬಳಿ ಇದ್ದ ಶಶಿ ಕುಮಾರ ಬಿನ್ ರಾಮೇಗೌಡ ರವರ ಮನೆಯ ಹತ್ತಿರ ಹೋದೆನು. ಶಶಿಕುಮಾರ ರವರ ಮನೆಯ ಹತ್ತಿರ DYSP ರವರು ತನಿಖೆ ಮಾಡಿದಾಗ ಶಶಿಕುಮಾರ ರವರ ಮನೆಯ ಹಿಂಭಾಗ ಇರುವ ಜಾಗದಲ್ಲಿ 1 ಗಾಂಜಾ ಗಿಡ ಬೆಳೆಸಿರುವುದು ಕಾಣಿಸಿತು. ನಾವು ಸ್ಥಳದಲ್ಲಿ ಸಿಕ್ಕಿದ ಶಶಿಕುಮಾರನನ್ನು ವಿಚಾರಣೆ ಮಾಡಿದಾಗ ಆತ ಗಾಂಜಾ ಗಿಡವನ್ನು ಬೆಳೆದಿರುವುದಾಗಿ 3 ಅಥವಾ 6 ತಿಂಗಳಿಗೆ

ಒಮ್ಮೆ ಅಪರಿಚಿತ ಸನ್ಯಾಸಿ ಬಂದು ಗಾಂಜಾ ಸೊಪ್ಪನ್ನು ಖರೀದಿ ಮಾಡಿ ಹೊಗುತ್ತಿರುವುದಾಗಿ ತಿಳಿಸಿದನು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

2. DYSP ರವರು ಮತ್ತು ನನ್ನ ಜೊತೆಯಲ್ಲಿ ಇದ್ದ ಪೊಲೀಸರು ಶಶಿಕುಮಾರನಿಂದ ಗಾಂಜಾ ಗಿಡಗಳನ್ನು ಕೀಳಿಸಿದ್ದೆವು. ನಮ್ಮ ಜೊತೆಯಲ್ಲಿ ಇದ್ದ HC 235 ನೇ ರವರಿಂದ electronic ತೂಕದ ಯಂತ್ರವನ್ನು ತರಿಸಿದೆವು. DYSP ರವರು ಸ್ಥಳದಲ್ಲಿ ಸಿಕ್ಕಿದ ಗಾಂಜಾ ಗಿಡವನ್ನು ತೂಕ ಮಾಡಿದಾಗ ಗಾಂಜಾ ಗಿಡ 770 ಗ್ರಾಂ ತೂಗಿತು. ಸದರಿ ಗಾಂಜಾ ಗಿಡವನ್ನು ಒಂದು ಬಿಳಿಯ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಸೀಲು ಮಾಡಿ ಪಂಚರ ಸಮಕ್ಷಮ ನಿಪಿ-2 ರಲ್ಲಿ ಗುರುತಿಸಿರುವ ಮಹಜರು ತಯಾರಿಸಿ ನಿಪಿ-3 ರಿಂದ 8 ರವರೆಗೆ ಗುರುತಿಸಿರುವ ಫೋಟೋಗಳನ್ನು ತೆಗೆಸಿ ವಶಡಿಪಸಿಕೊಂಡೆವು ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

3. DYSP ರವರು ಮೇಲೆ ಹೇಳಿದಂತೆ ಗಾಂಜಾ ಗಿಡವನ್ನು ವಶಪಡಿಸಿಕೊಂಡು ಆರೋಪಿ ಶಶಿಕುಮಾರನನ್ನು ನಮ್ಮ ಸ್ವಾಧೀನಕ್ಕೆ ಹಿಡಿದುಕೊಂಡು ಅರಕೆರೆ ಪೊಲೀಸ್ ಠಾಣೆಗೆ ಬಂದರು. ಅರಕೆರೆ ಪೊಲೀಸ್ ಠಾಣೆಯಲ್ಲಿ DYSP ರವರು ವರದಿಯನ್ನು ತಯಾರಿಸಿ ನನ್ನ ಕೈಗೆ ಕೊಟ್ಟರು . DYSP ರವರು ವರದಿಯ ಜೊತೆಯಲ್ಲಿ ನಿಪಿ-2 ರಲಿ ಗುರುತಿಸಿರುವ 1 ರಿಂದ 8 ರವರೆಗೆ ಗುರುತಿಸಿರುವ ಮಹೇಶ ಬಿನ್ ಪುಟ್ಟಶೆಟ್ಟಿ ರವರಿಗೆ ಜಾರಿ ಮಾಡಿರುವ ನೋಟೀಸು, ಮಹಜರು ಮತ್ತು ಫೋಟೋಗಳನ್ನು ನನ್ನ ಕೈಗೆ ಕೊಟ್ಟರು. DYSP ರವರು ವರದಿಯ ಜೊತೆಯಲ್ಲಿ ಡಿ ವಿ ಸಿದ್ದರಾಜು ರವರಿಗೆ ಜಾರಿ ಮಾಡಿರುವ ನೊಟೀಸು ಮತ್ತು ಆರೋಪಿಯನ್ನು ನನ್ನ ಸ್ವಾಧೀನಕ್ಕೆ ಕೊಟ್ಟರು. ನಾನು DYSP ಕೊಟ್ಟ ವರದಿ ಮತ್ತು ಇತರ ದಾಖಲೆಗಳ ಆಧಾರದ ಮೇಲೆ ಆರೋಪಿಯ ವಿರುದ್ಧ 104/23 ನೇ ಪ್ರಕರಣ ದಾಖಲಿಸಿ ನಿಪಿ.11 ರಲ್ಲಿ ಗುರುತಿಸಿರುವ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿದ್ದೇನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

4. ನನ್ನ ಸಮಕ್ಷಮ ಆರೋಪಿ ಸ್ವ ಇಚ್ಚೆಯಿಂದ ಯಾವುದೇ ವಿಚಾರ ಹೇಳಿಲ್ಲ ಎನ್ನುವುದು ಸರಿಯಲ್ಲ.

5. ನನ್ನ ಸಮಕ್ಷಮ ಸಿದ್ದರಾಜು ಬಿನ್ ದೇವೆಗೌಡ ಮತ್ತು ಮಹೇಶ ಬಿನ್ ಪುಟ್ಟಶೆಟ್ಟಿ ರವರು ಯಾವುದೇ ರೀತಿಯ ಹೇಳಿಕೆಗಳನ್ನು ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

6. ನಾನು ಆರೋಪಿಯ ವಿರುದ್ದ DYSP, PI ಕೆ ಆರ್ ಸಾಗರ ವೃತ್ತ ಮತ್ತು RFSL ಕಛೇರಿಯ ಅಧಿಕಾರಿಗಳು ರವರುಗಳ ಜೊತೆ ಸೇರಿಕೊಂಡು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಅಂತಿಮ ವರದಿಯಲ್ಲಿ ಅಪಾದಿಸಿರುವ ಅಪರಾಧ ಎಸಗಿಲ್ಲ ಎನ್ನುವುದು ಸರಿಯಲ್ಲ.

7. ನಾನು ಆರೋಪಿ ವಿರುದ್ದ ಸುಳ್ಳು ಸಾಕ್ಷಿ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ– ಮಾನ್ಯ ಸರ್ಕಾರಿ ಅಭಿಯೋಜಕರಿಂದಃ–

ಇಲ್ಲ ಎಂದು ಹೇಳಿದ್ದಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಸುಬ್ರಮಣ್ಯ.ಜೆ. ಎನ್.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.